**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಓಎಸ್ ನಂ. 338/2023**

**ಪಿಡಬ್ಲ್ಯೂಃ 1**

**ದಿನಾಂಕಃ18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಕೆ ಆರ್ ಆರ್ ರವರಿಂದಃ**

ನನ್ನ ಮುತ್ತಾತನ ಹೆಸರು ಕೆದಿರಿಗ ಅಲಿಯಾಸ್ ಕೆದಿರಪ್ಪ. ಅವರಿಗೆ ಹನುಮಪ್ಪ ಮತ್ತು ಪಾಪಣ್ಣ ಎಂಬ ಇಬ್ಬರು ಮಕ್ಕಳು. 1 ನೇ ಪ್ರತಿವಾದಿ ನನ್ನ ಅಣ್ಣ. 2 ನೇ ಪ್ರತಿವಾದಿ ನನ್ನ ಸಂಬಂಧಿಕರಲ್ಲ. 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಪ್ರತಿವಾದಿಗಳು ನನ್ನ ಸಂಬಂದಿಕರಲ್ಲ. ನನ್ನ ತಾತ ಹನುಮಪ್ಪ ರವರಿಗೆ ನರಸಿಂಹಯ್ಯ ಒಬ್ಬನೇ ಮಗ. ಪಾಪಣ್ಣರವರಿಗೆ ಕೆದಿರಪ್ಪ ಒಬ್ಬನೇ ಮಗ. ಸದರಿ ಕೆದಿರಪ್ಪರವರ ಮಗನೇ 1 ನೇ ಪ್ರತಿವಾದಿ ಎಂದರೆ ಸರಿ. ನನ್ನ ತಂದೆ ನರಸಿಂಹಪ್ಪರವರಿಗೆ ಇಬ್ಬರು ಹೆಂಡತಿಯರು. 1 ನೇ ಹೆಂಡತಿ ಸೀತಮ್ಮ, ಎರಡನೇ ಹೆಂಡತಿ ಗಂಗಮ್ಮ. 1 ನೇ ಹೆಂಡತಿ ಸೀತಮ್ಮರವರಿಗೆ ನಾರಾಯಣಮ್ಮ ಒಬ್ಬಳೇ ಮಗಳು. 2 ನೇ ಹೆಂಡತಿ ಗಂಗಮ್ಮರವರಿಗೆ ಇಬ್ಬರು ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು, ಆ ಪೈಕಿ ನಾನು ಮೊದಲನೇ ಮಗ.

ದಾವಾ ಸ್ವತ್ತನ್ನು ನನ್ನ ತಾತ ಹನಮಪ್ಪರವರು ಸಂಪಾದಿಸಿರುತ್ತಾರೆ. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 1 ನೇ ಹೆಂಡತಿ ಸೀತಮ್ಮರವರ ಒಬ್ಬಳೇ ಮಗಳಾದ ನಾರಾಯಣಮ್ಮ ರವರಿಗೆ ಮಾತ್ರ ಹಕ್ಕು ಇದ್ದು, 2 ನೇ ಹೆಂಡತಿಯ ಮಕ್ಕಳಾದ ನನಗೆ ಮತ್ತು ನನ್ನ ಸಹೋದರರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ನಮ್ಮ ಕುಟುಂಬದವರಿಗೆ ಇನ್ನೂ 6–7 ಆಸ್ತಿ ಇರುತ್ತವೆ. ಸೀತಮ್ಮರವರ ಮಗಳು ನಾರಾಯಣಮ್ಮ ನನ್ನ, 1 ನೇ ಪ್ರತಿವಾದಿ ಮತ್ತು ನನ್ನ ಸಹೋದರರ

ಸಹೋದರಿಯರ ಮೇಲೆ ಈ ದಾವಾ ಸ್ವತ್ತು ಮತ್ತು ಇತರೆ ಕುಟುಂಬದ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗವನ್ನು ಕೋರಿ ಒಎಸ್ 91/2018 ರ ದಾವೆ ಹಾಕಿರುತ್ತಾರೆ ಎಂದರೆ ಸರಿ.

ಈ ದಾವೆಯನ್ನು ಪ್ರತಿ ದಿನ ಗಲಾಟೆಗೆ ಬರುತ್ತಿದುದ್ದರಿಂದ ಹಾಕಿರುತ್ತೇನೆ. ನಾವು 2 ನೇ ಹೆಂಡತಿಯ ಮಕ್ಕಳಾಗಿರುವುದರಿಂದ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ರೆವಿನ್ಯೂ ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವಾ ಸ್ವತ್ತಿನಲ್ಲಿ ನಾರಾಯಣಮ್ಮ ಮತ್ತು 1 ನೇ ಪ್ರತಿವಾದಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವಾಗ ವಂಶವೃಕ್ಷದಲ್ಲಿ ಕುಟುಂಬದ ಎಲ್ಲಾ ಸದಸ್ಯರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. 1965 ರಂದು ನರಸಿಂಹಪ್ಪರವರಿಂದ ಪಾಪಣ್ಣರವರಿಗೆ ಹಕ್ಕು ಬಿಡುಗಡೆ ಪತ್ರ ಆಗಿರುತ್ತದೆ. ಸದರಿ ಹಕ್ಕು ಬಿಡುಗಡೆ ಪತ್ರ ನೋಂದಣಿಯಾಗಿರುತ್ತದೆ. ಹಕ್ಕು ಬಿಡುಗಡೆ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ.

ವಾದ ಪತ್ರದಲ್ಲಿ 1 ನೇ ಪ್ರತಿವಾದಿಯ ತಂದೆ ಕುಟುಂಬದಿಂದ ಬಿಡುಗಡೆ ಹೊಂದಿದ್ದಾರೆ ಎಂದು ತಿಳಿಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ಯಾವುದೇ ಸ್ವಾಧೀನ ಇಲ್ಲದಿದ್ದರೂ ವಂಶವೃಕ್ಷದಲ್ಲಿ 1 ನೇ ಪ್ರತಿವಾದಿಯನ್ನು ತೋರಿಸದೇ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. 2023 ರಲ್ಲಿ ಜಗಳಕ್ಕೆ ಬಂದಿದ್ದರು. 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿದ್ದು, ನಾನು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.1 ನೇ ಪ್ರತಿವಾದಿ ಈ ದಾವಾ ಸ್ವತ್ತನ್ನು ಒಳಗೊಂಡಂತೆ ಕುಟುಂಬದ ಇತರೆ ಸ್ವತ್ತುಗಳನ್ನು ಸೇರಿಸಿ ಒಎಸ್ ನಂಬರ್ 105/2024 ರಂತೆ ದಾವೆ ಹಾಕಿರುತ್ತಾರೆ ಎಂದರೆ ಸರಿ. ನಾನು ದಾಖಲೆಗಳನ್ನು ಸೃಷ್ಟಿಸಿ ಮಾಡಿಕೊಂಡಿರುವುದರಿಂದ ಆ ದಾವೆಯಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ನಾನು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/–
(ಶ್ರೀಮತಿ ರೋಹಿಣಿ. ಡಿ)
ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು